

ನಿಜಾಮುದ್ದಿನ್ ದರ್ಗಾದಲ್ಲಿ ಕವ್ವಾಲಿ ಗುಂಗು

ಇಳಿಸಿ ನಿಲ್ಲುತ್ತಿದ್ದವು. ರಸ್ತೆಯ ಆಚೆಬದಿಯಲ್ಲಿದ್ದ ಕರೀಮ್ಸ್ ರೆಸ್ಟೋರೆಂಟಿನಲ್ಲಿ ಕಬಾಬ್ ಕೊಳ್ಳಲು ಜನ ಗುಂಪುಗಟ್ಟಿದ್ದರು. ಮಿನಾರಿನ ತುತ್ತತುದಿಯಿಂದ ಎಲ್ಲವೂ ತನ್ನದೇ ಆದ ಏಕಾಂತದಲ್ಲಿ, ವಿಚಿತ್ರ ಸಮಾಧಾನದ ಲಯದಲ್ಲಿ ಚಲಿಸುತ್ತಿರುವಂತೆ ಕಂಡಿತು.

## ನಿಜಾಮುದ್ದೀನ್ ದರ್ಗಾ

ಜಾಮಾ ಮಸ್ಜಿದ್ದಿಗೆ ಹತ್ತಿರವೇ ಇದ್ದ ನಿಜಾಮುದ್ದೀನ್ ದರ್ಗಾ ತಲುಪಿದಾಗಾಗಲೇ ರಾತ್ರಿ ಎಂಟಾಗಿತ್ತು. ಪ್ರತೀ ಗುರುವಾರ ರಾತ್ರಿಯ ನಮಾಜ್ ಮುಗಿದ ನಂತರ ನಡೆಯುವ ಕವ್ವಾಲಿ ದಿಲ್ಲಿಯಲ್ಲಿ ಎಲ್ಲೆಡೆ ಪ್ರಚಲಿತವಾಗಿದ್ದು, ನಾನು ಮಾಡಿಕೊಂಡಿದ್ದ ಪಟ್ಟಿಯಲ್ಲೂ ಪ್ರಮುಖವಾಗಿತ್ತು. ಇನ್ನೇನು ಶುರುವಾಗುವುದೆಂದು ಕಾಯುತ್ತಿದ್ದಾಗ ದರ್ಗಾದಲ್ಲಿ ಕೂತಿದ್ದ ವೃದ್ಧರೊಬ್ಬರು 'ಎಲ್ಲಿಂದ ಬಂದಿದ್ದೀರ' ಅಂತ ಕೇಳಿದರು. ಬೆಂಗಳೂರಿನಿಂದ ಬಂದಿರುವುದಾಗಿ, ದರ್ಗಾದಲ್ಲಿ ಕವ್ವಾಲಿ ಕೇಳಲು ಕಾಯುತ್ತಿದ್ದೇವೆಂದು ಹೇಳಿದೆ. ಅವರು ಕವ್ವಾಲಿ ಶುರುವಾಗಲು ಇನ್ನು ತುಂಬಾ ಸಮಯವಾಗುತ್ತೆಂದು, ನಾವು ಕಾಯಬೇಕೆಂದು ಹೇಳಿದರು. ಪ್ರಾಂಗಣದಲ್ಲಿ ಹರಕೆ ಹೊತ್ತ ಹೆಂಗಸರು ವಿಚಿತ್ರ ಪರವಶತೆಯಲ್ಲಿ ದರ್ಗಾದ ಒಂದು ಬದಿಯಿಂದ ಮತ್ತೊಂದು ಬದಿ ಸುತ್ತುಹಾಕುತ್ತಿದ್ದುದು ದಿಗಿಲು ಹುಟ್ಟಿಸುವಂತಿತ್ತು. ಸಾವಿರಾರು ಕಿಂಡಿಗಳಿದ್ದ ಗೋಡೆಯೊಂದಕ್ಕೆ ಒರಗಿ ನಾನು, ನನ್ನ ಗೆಳತಿ ಕೂತಿದ್ದೆವು. ಗೋಡೆಯ ಕಿಂಡಿಗಳ ಮೂಲಕ ಹರಿದು ಬರುತ್ತಿದ್ದ ಬೆಳಕು ನೆರೆದಿದ್ದ ಜನರ ಮೇಲೆ ಬಿದ್ದು ಇಡೀ ಪ್ರಾಂಗಣದಲ್ಲಿ ಮನುಷ್ಯರ ನೆರಳುಗಳ ಅಮೂರ್ತ ಚಿತ್ರಗಳು ಮೂಡಿದ್ದವು. ಕಾದು ತತ್ತರಿಸಿದ್ದ ನಾವು ಇನ್ನೇನು ಹೊರಟುಬಿಡೋಣವೆನ್ನುವಷ್ಟರಲ್ಲಿ ಇಬ್ಬರು ಹುಡುಗರು ಎರಡು ದೊಡ್ಡ ಪೊರಕೆಯಿಂದ ಪ್ರಾಂಗಣವನ್ನು ಗುಡಿಸತೊಡಗಿದರು. ಅವರ ಹಿಂದೆಯೇ ಇನ್ನಿಬ್ಬರು ಚಾಪೆಗಳನ್ನು ತಂದು ಹಾಸಿದರು. ಎಲ್ಲೆಡೆ ಚದುರಿಹೋಗಿದ್ದ ಜನರು ಬಂದು ಜಾಗ ಹುಡುಕಿಕೊಂಡು ಕೂರುತ್ತಿದ್ದರು. ನಾವಿಬ್ಬರು ಎದ್ದು ಇನ್ನೂ ಹತ್ತಿರವಿರುವ ಒಳ್ಳೆಯ ಜಾಗವನ್ನು ನೋಡಿ ಕುಳಿತೆವು. ಕೆಲವೇ ನಿಮಿಷಗಳಲ್ಲಿ ಹಾರ್ಮೋನಿಯಂ, ತಬಲಾಗಳು ಕಂಡವು. ಮೌಲ್ವಿಯೊಬ್ಬರು ಬಂದು ಹಾಡುಗಾರರ ಕಿವಿಯಲ್ಲಿ ಏನೋ ಹೇಳಿ ಹೋದರು. ಒಂದೇ ಸಮನೆ ಓಡಾಡುತ್ತಿದ್ದ ಹರಕೆಯ ಹೆಂಗಸರೂ ಜನರ ಗುಂಪಿನಲ್ಲೆಲ್ಲೋ ಕಣ್ಮರೆಯಾಗಿಬಿಟ್ಟಿದ್ದರು. ಏನೋ ಸಂಭವಿಸಲಿದೆ ಎಂಬ ಕಾತುರ ಹಾಗೂ ಆತಂಕದಲ್ಲಿ ಎಲ್ಲವೂ ಸ್ಥಬ್ದವಾಗಿತ್ತು.

ದರ್ಗಾದೊಳಗಿನಿಂದೊಬ್ಬ ಒಂದು ಕೈಯಲ್ಲಿ ಎತ್ತರವಾದ ಹಸಿರು ಬಣ್ಣದ ಚಾಮರವನ್ನು ಮತ್ತೊಂದು ಕೈಯಲ್ಲಿ ಧೂಪವನ್ನು ಹಿಡಿದು ಬಂದ. ಅವನು ಚಾಮರ ಬೀಸುತ್ತಿದ್ದಂತೆಯೇ ಹಾರ್ಮೋನಿಯಂ, ತಬಲಾಗಳ ನುಡಿಸಾಣಿಕೆ ಏಕಕಾಲಕ್ಕೆ ಶುರುವಾಯಿತು. ಅದರ ಹಿಂದೆಯೇ ಚಿರಪರಿಚಿತವಾದ ಕವ್ವಾಲಿ ಕೈಬಡಿತದ ಸದ್ದು. 'ತಾಜ್ ದಾರ್ ಎ ಹರಮ್' ಎಂದು ಇಬ್ಬರು ಹಾಡಲು ಶುರುಮಾಡಿದಾಗ ಕೈಬಡಿತಗಳು ಇನ್ನೂ ಜೋರಾದವು. ಮುಖ್ಯ ಹಾಡುಗಾರರ ಹಿಂದೆ ಕುಳಿತಿದ್ದ ನಾಲ್ಕೈದು ಜನ ಹುಡುಗರು ಹುರುಪಿನಿಂದ ಅಲ್ಲಲ್ಲಿ ದನಿಗೂಡಿಸುತ್ತಾ ಹಾಡಿಗೆ ಇನ್ನಷ್ಟು ಜೀವ ತುಂಬಿದರು. ಜಾಮಾ ಮಸ್ಜಿದ್ದಿನ ಕಾದ ನೆಲದ ಮೇಲೆ ಎರಚುತ್ತಿದ್ದ ನೀರಿನ ಹಾಗೆ, ಇಡೀ ದರ್ಗಾದಲ್ಲಿ ಕವ್ವಾಲಿಯ ಧ್ವನಿಗಳು ಅನುರಣಿಸುತ್ತಿದ್ದವು. ಒಂದಾದ ಮೇಲೊಂದು ಕವ್ವಾಲಿಗಳು ಅಲೆಗಳಂತೆ ಹರಿದುಬಂದವು. ಎಷ್ಟೋ ಹೊತ್ತಿನ ನಂತರ ವಾಚಿನ ಕಡೆ ನೋಡಿದಾಗ ಗಂಟೆ ಹನ್ನೊಂದುವರೆಯಾಗಿತ್ತು. ಚೈತ್ರಿಕಾ ತಾನು ತಂಗಿದ್ದ ಹಾಸ್ಟೆಲಿನ ವಾರ್ಡನ್ನನಿಗೆ ಫೋನ್ ಮಾಡಿ ಬರುವುದು ತಡವಾಗುವುದಾಗಿ ತಿಳಿಸಿದಳು.

## ಪಿಯಾನೊ ಮ್ಯಾನ್ ಜಾಝ್

ಫೇಸ್‌ಬುಕ್ಕಿನಿಂದಾದ ಹಲವಾರು ಅದ್ಭುತಗಳಲ್ಲಿ ಛಾಯಾಗ್ರಾಹಕ 'ವಿಜಯ್ ಕಾಟೇ'ಯ ಪರಿಚಯವೂ ಒಂದು. ದಿಲ್ಲಿವಾಸಿಯಾಗಿದ್ದ ಕಾಟೇ ಹಲವಾರು ವರ್ಷಗಳಿಂದ ತೆಗೆಯುತ್ತಿದ್ದ ಸಂಗೀತಗಾರರ ಛಾಯಾಚಿತ್ರಗಳ ಮೂಲಕ ಪರಿಚಯವಿದ್ದರು. ಅವನ ಹಾಡುಗಾರರ, ಗಿಟಾರ್‌ಪಿಯಾನೊ ವಾದಕರ ಕಪ್ಪು ಬಿಳುಪಿನ ಚಿತ್ರಗಳು ನನ್ನನ್ನು ಇನ್ನಿಲ್ಲದಂತೆ ಸೆಳೆದಿದ್ದವು. ಆ ಛಾಯಾಚಿತ್ರಗಳಲ್ಲಿ ಪದೇಪದೆ ಕಾಣುತ್ತಿದ್ದ 'ಪಿಯಾನೊ ಮ್ಯಾನ್ ಜಾಝ್' ಕ್ಲಬ್ ಎನ್ನುವ ಮ್ಯೂಸಿಕ್ ಬಾರನ್ನು ಅವನ ಜೊತೆಗೇ ಹೋಗಿ ನೋಡಬೇಕೆಂದು ಪಣತೊಟ್ಟು ಅವನನ್ನು ಸಂಪರ್ಕಿಸಿದೆ. **'It's a small bar.. nothing fancy'** ಎಂದು ಮೊದಲಿಗೆ ಹೇಳಿ ನಂತರ ಅಲ್ಲೇ ಭೇಟಿಮಾಡಲು ಒಪ್ಪಿದ.

ನಾನು ತಲುಪಿದಾಗ ಅವನಿನ್ನು ಬಂದಿರಲಿಲ್ಲ. ಕೆಳಗೆ ಹಾಗೂ ಮೇಲಿನ ಮಹಡಿಯಲ್ಲಿ ಕೂರಲು ಸ್ಥಳವಿದ್ದರೂ ಅವನು ಹೇಳಿದಂತೆ ಅದು ನಿಜಕ್ಕೂ ಚಿಕ್ಕ ಜಾಗವಾಗಿತ್ತು. ಒಂದಿಬ್ಬರು ರಾತ್ರಿ ನಡೆಯಲಿದ್ದ ಸಂಗೀತ ಕಛೇರಿಗೆ ಸಿದ್ಧತೆ ಮಾಡುತ್ತಿದ್ದರು. ಕಛೇರಿ ನಡೆಯಲಿದ್ದ ಜಾಗದ ಎದುರು ಐದಾರು ಅಡಿಕೆ ಬಣ್ಣದ ಕುರ್ಚಿ ಹಾಗೂ ಟೇಬಲ್ಲುಗಳಿದ್ದವು. ಅದರ ಹಿಂದೆ ಚಿಕ್ಕದಾದ ಬಾರ್ ಕೌಂಟರ್ ಇತ್ತು. ಮೇಲಿನ ಮಹಡಿಯಲ್ಲೂ ಇದೇ ರೀತಿಯ ಕುರ್ಚಿಗಳಿದ್ದವು. ಹಾಗೂ ಅದಕ್ಕೆ ಸೇರಿದಂತೆ ಸಿಗರೇಟ್ ಸೇದುವವರಿಗೆ ಇನ್ನೂ ಚಿಕ್ಕದಾದ ಸ್ಮೋಕಿಂಗ್ ರೂಮೊಂದಿತ್ತು. ಇಡೀ ಬಾರಿನಲ್ಲಿ ಮಂದ ಬೆಳಕಿನ ಲೈಟ್ ಬಲ್ಬುಗಳಿದ್ದಿದ್ದರಿಂದ ಹುಡುಕದೇ ಏನೂ ಕಾಣುತ್ತಿರಲಿಲ್ಲ.

ಅಲ್ಲೇ ಕುಳಿತು ಸೌಂಡ್ ಸಿಸ್ಟಮ್ಮಿನ ಬಳಿ ಕೆಲಸ ಮಾಡುತ್ತಿದ್ದ ಹುಡುಗನನ್ನು ನೋಡುತ್ತಿದ್ದಾಗ ಹಿಂದಿನಿಂದ ಯಾರೊ ಮೆಲ್ಲಗೆ ಭುಜ ತಟ್ಟಿದರು. ತಿರುಗಿದಾಗ ಕತ್ತಲಿನ ಮಡುವಿನಿಂದ ಹುಟ್ಟಿಬಂದವನಂತಿದ್ದ ವಿಜಯ್ ಕಾಟೇ ಕಂಡ. ಕಪ್ಪು ಟೀ ಶರ್ಟ್ ಹಾಗೂ ಲೂಸಾದ ಬ್ಯಾಗೀ ಪ್ಯಾಂಟನ್ನು ಹಾಕಿದ್ದ. ಸುಮಾರು ಸೊಂಟದವರೆಗೂ



ವಿಜಯ ಕಾಟೇ